ಕರ್ನಾಟಕ ಸರ್ಕಾರ

ಸಂಖ್ಯೆ: ಲಾ 163 ಎಲ್‌ಸಿಎಲ್ 05 ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು,
ದಿನಾಂಕ:25.06.2005

## ಸುತ್ತೋಲೆ

ವಿಷಯ: ನ್ಯಾಯಾಲಯದಲ್ಲಿ ಸಲ್ಲಿಸುವ ವಕಾಲತ್ತು ಮತ್ತು ಮಧ್ಯಂತರ ಅರ್ಜಿಗಳಿಗೆ ಸ್ಟಾಂಪ್ ಹಚ್ಚುವ ಬಗ್ಗೆ.

ಉಲ್ಲೇಖ:
1) ಸುತ್ತೋಲೆ ಸಂಖ್ಯೆ: ಲಾ 3 ಎಲ್‌ಜಿಆರ್ 97 ದಿನಾಂಕ: 15.05.1997
2) ಸುತ್ತೋಲೆ ಸಂಖ್ಯೆ: ಲಾ 107 ಉಕಾ(ಅ) 01, ದಿನಾಂಕ: 15.01.2001.
3) ಸುತ್ತೋಲೆ ಸಂಖ್ಯೆ: ಲಾ 29 ಎಲ್‌ಸಿಎಲ್ 01 ದಿನಾಂಕ: 19.02.2002.

-----

ಕರ್ನಾಟಕ ವಕೀಲರ ಕ್ಷೇಮಾಭಿವೃದ್ಧಿ ನಿಧಿ ಅಧಿನಿಯಮ, 1983ಕ್ಕೆ ಕರ್ನಾಟಕ ಅಧಿನಿಯಮ 15:2005ರ ಮೂಲಕ ತಿದ್ದುಪಡಿ ತರಲಾಗಿದ್ದು, ತತ್ಪರಿಣಾಮವಾಗಿ ಕರ್ನಾಟಕ ವಕೀಲರ ಕ್ಷೇಮಾಭಿವೃದ್ಧಿ ಕಲ್ಯಾಣ ನಿಧಿ ನಿಯಮಗಳಿಗೆ (1986), ಅಧಿಸೂಚನೆ ಸಂಖ್ಯೆ:ಲಾ 110 ಎಲ್‌ಸಿಎಲ್ 2005ರ ಮುಖಾಂತರ ತಿದ್ದುಪಡಿ ತರಲಾಗಿದೆ.

ಆ ಪ್ರಕಾರ ನ್ಯಾಯಾಲಯ, ಆಡಳಿತ ನ್ಯಾಯ ಮಂಡಳಿ, ಹಾಗೂ ಇತರೆ ನ್ಯಾಯ ಪ್ರಾಧಿಕಾರಗಳ ಮುಂದೆ ಸಲ್ಲಿಸುವ ಪ್ರತಿ ವಕಾಲತ್ತು ಹಾಗೂ ಮಧ್ಯಂತರ ಅರ್ಜಿಗೆ, ಕ್ರಮವಾಗಿ ರೂ.10.00 ಹಾಗೂ ರೂ.5.00ರ ವಕೀಲರ ಕ್ಷೇಮಾಭಿವೃದ್ಧಿ ಕಲ್ಯಾಣ ನಿಧಿ ಸ್ಟಾಂಪನ್ನು ಹಚ್ಚಬೇಕಾಗಿರುತ್ತದೆ.

ವಕೀಲರುಗಳು ಯಾವುದೇ ವಕಾಲತ್ತು ಅಥವಾ ಸಂವಾದದ ಅರ್ಜಿ / ಮಧ್ಯಂತರ ಅರ್ಜಿ ಸಲ್ಲಿಸುವಲ್ಲಿ ಕೋರ್ಟ್ ಫೀ ಸ್ಟಾಂಪ್ ಜೊತೆಗೆ ಸದರಿ ಸ್ಟಾಂಪ ಹಚ್ಚಬೇಕಾಗಿರುವುದಾಗಿ ಸ್ಪಷ್ಟಪಡಿಸಲಾಗಿದೆ. ಈ ರೀತಿ ಅರ್ಜಿಗಳಿಗೆ ಸ್ಟಾಂಪ್ ಹಚ್ಚಿರುವುದನ್ನು ಖಾತ್ರಿ ಪಡಿಸಿಕೊಳ್ಳುವಂತೆ ನ್ಯಾಯಾಲಯ,

-----2

ನ್ಯಾಯ ಮಂಡಳಿ ಹಾಗೂ ಇತರ ಪ್ರಾಧಿಕಾರಗಳಿಗೆ ತಿಳಿಸಲಾಗಿದೆ.

(ಸಿ.ಎ.ಬಾಬು ರವೀಂದ್ರನಾಥ್ ಪಟೇಲ್)
ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)
ಆಡಳಿತ- 2ಶಾಖೆ, ಕಾನೂನು ಇಲಾಖೆ

27/6/05

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು (ಇದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವಂತೆ ಕೋರುತ್ತಾ)

ಇವರಿಗೆ:

1) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು : ಕಾರ್ಯದರ್ಶಿಗಳು
2) ಎಲ್ಲಾ ಇಲಾಖಾ ಮುಖ್ಯಸ್ಥರು
3) ಎಲ್ಲಾ ಜಿಲ್ಲಾಧಿಕಾರಿಗಳು
4) ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
5) ಅಡ್ವೋಕೇಟ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
6) ನಿರ್ದೇಶಕರು, ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆ, ಕಾವೇರಿ ಭವನ, ಬೆಂಗಳೂರು
7) ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಬೆಂಗಳೂರು
8) ಶಾಖಾ ರಕ್ಷಾ ಕಡತ

ಪ್ರತಿ ಇವರಿಗೆ:

1) ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಆಪ್ತ ಕಾರ್ಯದರ್ಶಿಗಳು
2) ಎಲ್ಲಾ ಅಪರ ಕಾರ್ಯದರ್ಶಿಗಳು, )
3) ಎಲ್ಲಾ ಉಪ ಕಾರ್ಯದರ್ಶಿಗಳು ) ಕಾನೂನು ಇಲಾಖೆ
4) ಎಲ್ಲಾ ಅಧೀನ ಕಾರ್ಯದರ್ಶಿಗಳು )

2-8-05

ಸಂ. ಡಿಸಿ. ಇ. ಎ. ಎ. ೮೯ ೧೨ / ೨೦೦೫-೦೬

ಉಪ-ವಿಭಾಗಾಧಿಕಾರಿಗಳು ಹಾಸನ / ಸಕಲೇಶಪುರ ಹಾಸನ ಜಿಲ್ಲೆಯ ಎಲ್ಲಾ ತಹಸೀಲ್ದಾರ್ ಗಳಿಗೆ ಪ್ರತಿ ರವಾನಿಸಿದೆ

ಜಿಲ್ಲಾಧಿಕಾರಿಗಳ ಪರವಾಗಿ
ಹಾಸನ ಜಿಲ್ಲೆ, ಹಾಸನ